**ದಿನಾಂಕಃ 05.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

**11.** ನಾನು ಬ್ಯಾಂಕ್ ಖಾತೆಯನ್ನು ಪರಿಶೀಲಿಸಿದ್ದು ಶ್ರೀ ಲಕ್ಷ್ಮಿ ನರಸಿಂಹ ಎಂಟರ್‌ಪ್ರೈಸಸ್ ಖಾತೆಗೆ 15 ಲಕ್ಷ ರೂ. ಜಮಾ ಆಗಿದೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯನ್ನು ಒಪ್ಪಿ ಅದರಲ್ಲಿನ ಸಹಿ ನನ್ನದು ಎಂದು ಒಪ್ಪಿಕೊಂಡ ಕಾರಣ ದಾಖಲೆಯನ್ನು **ನಿ.ಡಿ.2** ಎಂದು, ಸಹಿಯನ್ನು **ನಿ.ಡಿ.2(ಎ)** ಎಂದು ಗುರುತಿಸಲಾಯಿತು. ನಿ.ಡಿ.2 ರಲ್ಲಿ ಅಶೋಕ್ ಚೌರಿಯಪ್ಪ ಎಂಬುವವರು ಸಹಿ ಮಾಡಿರುತ್ತಾರೆ ಎಂದು ಒಪ್ಪಿಕೊಂಡ ಕಾರಣ ಸದರಿ ಸಹಿಯನ್ನು **ನಿ.ಡಿ.2(ಬಿ)** ಎಂದು ಗುರುತಿಸಲಾಯಿತು.

**12.** ನಮ್ಮ ಮನೆಯ ವಿಳಾಸ ನಂ.17 ಗವಿಗಂಗಾಧರೇಶ್ವರ ಸ್ವಾಮಿ ದೇವಸ್ಥಾನದ ಪಕ್ಕ, ಗವಿಪುರಂ, ಗುಟ್ಟಹಳ್ಳಿ, ಬೆಂಗಳೂರು-19. ನಿ.ಡಿ.2 ರಲ್ಲಿನ ಖಂಡಿಕೆ 4 ರಲ್ಲಿನ ಅಂಶಗಳು ಸತ್ಯದಿಂದ ಕೂಡಿರುತ್ತವೆ. ನಿ.ಡಿ.2 ರಲ್ಲಿ ನಮೂದಿಸಿರುವ 15 ಲಕ್ಷ ರೂ.ಗಳ ಚೆಕ್ಕು ನನ್ನ ಹೆಸರಿನಲ್ಲಿದೆ, ಆದರೆ ಶ್ರೀ ಲಕ್ಷ್ಮಿ ನರಸಿಂಹ ಎಂಟರ್‌ಪ್ರೈಸಸ್ ಹೆಸರಿನಲ್ಲಿ ಕೆಲಸ ನಿರ್ವಹಿಸಿರುವ ಕಾರಣ ಚೆಕ್ಕನ್ನು ಸ್ಟಾಪ್ ಪೇಮೆಂಟ್ ಮಾಡಿ ಎಂದು ವಿವಾದಿತ ಚೆಕ್ಕನ್ನು ತಮ್ಮ ಬಳಿಯೇ ಇಟ್ಟುಕೊಂಡು ಶ್ರೀ ಲಕ್ಷ್ಮಿ ನರಸಿಂಹ ಎಂಟರ್‌ಪ್ರೈಸಸ್ ಗೆ ಸೇರಿದಂತಹ ಚೆಕ್ ನಂಬರ್ 000985 ನೀವು ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಮೊದಲನೆ ಚೆಕ್ಕನ್ನು ನೀವು ಯಾವಾಗ ಹಾಜರುಪಡಿಸಿರುತ್ತೀರಿ ಎಂದರೆ ದಿ.14.02.2024 ರಂದು ಹಾಜರುಪಡಿಸಿರಬಹುದು ಎಂದು ನುಡಿಯುತ್ತಾರೆ. ಚೆಕ್ ನಂಬರ್ 000985 ಅನ್ನು ನೀವು ಖುದ್ದಾಗಿ ಬ್ಯಾಂಕಿಗೆ ಹಾಜರುಪಡಿಸಿದ್ದೀರಾ ಎಂದರೆ ನಾನು ಖುದ್ದಾಗಿ ಹಾಜರುಪಡಿಸಿರುವುದಿಲ್ಲ, ಆರೋಪಿಯೇ ಆ ಚೆಕ್ಕನ್ನು ಬಳಸಿಕೊಂಡು ನೆಫ್ಟ್ ಮುಖಾಂತರ ಹಣವನ್ನು ವರ್ಗಾಯಿಸಿದರು ಎಂದು

ನುಡಿಯುತ್ತಾರೆ. ನೆಫ್ಟ್ ಮುಖಾಂತರ ಹಣ ವರ್ಗಾವಣೆಯಾದ ಬಗ್ಗೆ ಫೋನ್ ಮೆಸೇಜ್ ಮುಖಾಂತರ ನಾನು ತಿಳಿದುಕೊಂಡಿರುತ್ತೇನೆ. ಶ್ರೀ ಲಕ್ಷ್ಮಿ ನರಸಿಂಹ ಎಂಟರ್‌ಪ್ರೈಸಸ್ ಗೆ 15 ಲಕ್ಷ ರೂ.ಗಳನ್ನು ಆರೋಪಿ ವರ್ಗಾಯಿಸಿದ ನಂತರ ಆರೋಪಿಯಿಂದ ನಿಮಗೆ ಯಾವುದೇ ಹಣ ಬರಬೇಕಾಗಿರಲಿಲ್ಲ ಎಂದರೆ ಸರಿಯಲ್ಲ.

**13.** ವಿವಾದಿತ ಚೆಕ್ಕನ್ನು ಆರೋಪಿಗೆ ಹಿಂದಿರುಗಿಸದೆ ನಿಮ್ಮ ಬಳಿಯೇ ಇಟ್ಟುಕೊಂಡು ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ಆರೋಪಿಗೆ ಮೋಸ ಮಾಡುವ ಉದ್ದೇಶದಿಂದ ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.